ಒ.ಎಸ್. - 118/2022

ಪಿ.ಡಬ್ಲ್ಯು. - 01

**ದಿನಾಂಕ 04-01 -2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಪ್ರತಿವಾದಿಯರ ಪರ ಶ್ರೀ ಡಿ ಎಸ್ ವಕೀಲರಿಂದಃ**

ದಾವೆ ಹಾಕುವ ಸಮಯದಲ್ಲಿ ದಾವಾ ಸ್ವತ್ತಿನಲ್ಲಿರುವ ಮನೆಯ ಮೌಲ್ಯ ರೂ 25 ಲಕ್ಷ . ಮನೆ 3 ಸೆಂಟ್ಸ್ ಜಾಗದಲ್ಲಿರುತ್ತದೆ . ಮನೆಯ ನೆಲಕ್ಕೆ ಮಾರ್ಬಲ್, ಟೈಲ್ಸ್ ಹಾಕಿರುತ್ತೇವೆ . ಮೇಲ್ಚಾವಣಿ ಆರ್ ಸಿ ಸಿ ಆಗಿರುತ್ತದೆ . ಮನೆಯಲ್ಲಿ 2 ಬೆಡ್ ರೂಮ್ ಗಳು ಒಂದು ಹಾಲ್ , ಒಂದು ದೇವರ ಕೋಣೆ, ಒಂದು ಕಿಚನ್ ಇರುತ್ತದೆ . ಸದ್ರಿ ಮನೆಗೆ ಹೊಂದಿಕೊಂಡಂತೆ ಪಂಪ್ ಸೆಟ್ , ಬಾವಿ , ಕಾಂಪೌಂಡ್ ಇರುತ್ತದೆ ಎಂದರೆ ಸರಿ. ಪಂಪ್ ಸೆಟ್ , ಬಾವಿ , ಕಾಂಪೌಂಡ್ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಸಾಮಾನ್ಯವಾಗಿ 1995 ರಲ್ಲಿ ಇವುಗಳನ್ನು ಮಾಡಲಾಗಿದೆ . ಈ ಅಭಿವೃದ್ಧಿಗಳನ್ನು ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಜಾಗಕ್ಕೆ ಹೊಂದಿಕೊಂಡಂತೆ 2 ಸೈಟ್ ಗಳು ಇದ್ದು ಅದನ್ನು ನಾನು ನನ್ನ ಹೆಂಡತಿಯ ಹೆಸರಿನಲ್ಲಿ ಖರೀದಿಸಿರುತ್ತೇನೆ. ಅದರಲ್ಲಿ ಇರುವ ತೆಂಗು ಮತು ಅಡಿಕೆಯನ್ನು ಪ್ರತಿವಾದಿ ಅಭಿವೃದ್ಧಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ನಾನು 1986 ರಲ್ಲಿ ಬೆಹರಿನ್ ಗೆ ಹೋಗಿದ್ದೆ. ನಂತರ 1996 ರಲ್ಲಿ ಮದುವೆಯಾದೆ . ನನ್ನ ಹೆಂಡತಿ ಮತ್ತು ಮಕ್ಕಳು ಬೆಹರಿನ್ ನಲ್ಲಿಯೇ ವಾಸವಾಗಿದ್ದೆವು. ನಾವು ಬೆಹರಿನ್ ನಲ್ಲಿ ಇದ್ದಾಗ ನನ್ನ ತಂಗಿ ಜಲಜರವರ ಮಗ ಹರೀಶ್ ಈ ಎಲ್ಲವನ್ನು ನೋಡಿಕೊಳ್ಳುತಿದ್ದ ಆತನಿಗೆ ನಾವು ಹಣ ಕಳುಹಿಸುತಿದ್ದೆವು . ಈ ಬಗ್ಗೆ ನಮ್ಮ ಬಳಿ ದಾಖಲೆ ಇರುತ್ತದೆ. ಅವುಗಳನ್ನು ನನ್ನ ತಂಗಿಯೇ ಅಭಿವೃದ್ಧಿ ಮಾಡಿದ್ದರು ಎಂದರೆ ಸರಿಯಲ್ಲ . ಪ್ರತಿವಾದಿಯ ಮಗ ಏನೆಲ್ಲಾ ಕೆಲಸ ಮಾಡಿದ್ದ ಎನ್ನುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ . ದಾವಾ ಸ್ವತ್ತನ್ನು ಅನಂತ ಶೆಟ್ಟಿ ಮಗ ನಾಗರಾಜ್ ಶೆಟ್ಟಿ ರವರಿಂದ 1995 ರಲ್ಲಿ ಕ್ರಯಕ್ಕೆ ಪಡೆಯಲಾಯಿತು . ದಸ್ತಾವೇಜು ಆಗುವಾಗ ನಾನು ಬೆಹರಿನ್‌ನಲ್ಲಿದ್ದೆ ನನ್ನ ಹೆಂಡತಿ ಖರೀದಿಸಿದ್ದರು . ಆ ಸಮಯದಲ್ಲಿ ಎಷ್ಟು ಕಂತುಗಳಲ್ಲಿ ಮತ್ತು ಯಾವಾಗ ಪಾವತಿಸಿದರು ಎಂದು ನನಗೆ ಹೇಳಲು ಆಗುವುದಿಲ್ಲ . ನನ್ನ ಹೆಂಡತಿ ಈಗ ಊರಿನಲ್ಲಿ ಇದ್ದಾರೆ . ನನ್ನ ಹೆಂಡತಿಗೆ ಅಸ್ತಮಾ , ಬಿಪಿ ಮತ್ತು ಶುಗರ್ ಇರುತ್ತದೆ . ಆಕೆಗೆ 7-8 ವರ್ಷಗಳಿಂದ ಖಾಯಿಲೆ ಇರುತ್ತದೆ . ನಿಪಿ 1 ಜಿಪಿಎ ನ್ನು ನನ್ನ ಹೆಂಡತಿ ಮನೆಯಲ್ಲಿ ಸಹಿ ಮಾಡಿಕೊಟ್ಟಿರುತ್ತಾರೆ . ನಿಪಿ 1 ಕ್ಕೆ ಸಹಿ ಮಾಡುವಾಗ ನನ್ನ ಹೆಂಡತಿ ಮತ್ತು ನಾನು ಮಾತ್ರ ಇದ್ದೆವು . ಬೇರೆ ಯಾರು ಇರಲಿಲ್ಲ . ನನ್ನ ಹೆಂಡತಿಯ ಸಹಿ ಪಡೆದು ನಂತರ ಬಂದು ನೋಟರಿಗೆ ಕೊಟ್ಟಿರುತ್ತೇವೆ . ವಾದಪತದ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಕ್ಕೆ ಸಹಿಯನನ್ನು ನಾನು ಮನೆಯಲ್ಲಿಯೇ ನನ್ನ ಹೆಂಡತಿಯಿಂದ ಮಾಡಿಸಿಕೊಂಡು ತಂದು ಕೊಟ್ಟಿರುತ್ತೇನೆ . ಆ ಸಮಯದಲ್ಲಿ ನನ್ನ ಹೆಂಡತಿ ಮತ್ತು ನಾನು ಮಾತ್ರ ಇದ್ದೆವು . ನನ್ನ ಹೆಂಡತಿ ಸಭೆ ಸಮಾರಂಭ ಮತ್ತು ದೇವಸ್ಥಾನಕ್ಕೆ ಈಗಲೂ ಹೋಗುತಿದ್ದಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮಣಿಪಾಲದಲ್ಲಿ ಚಿಕಿತ್ಸೆ ಪಡೆಯುತಿದ್ದಾರೆ. ನನ್ನ ಹೆಂಡತಿ ಆರೋಗ್ಯವಾಗಿದ್ದರೂ ಕೂಡ ಆಕೆಗೆ ಆರೋಗ್ಯ ಸರಿ ಇಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ . ನ್ಯಾಯಾಲಯಕ್ಕೆ ಬಂದರೇ ಸತ್ಯ ಗೊತ್ತಾಗುತ್ತದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ .

ಪ್ರತಿವಾದಿಯ ಗಂಡ ಕೂಡ ಬೆಹರಿನ್ ನಲ್ಲಿ ಕೆಲಸ ಮಾಡುತಿದ್ದರು ಎಂದರೆ ಸರಿ . ನನ್ನ ತಂದೆಗೆ ನಾನು ಮಾತ್ರ ಗಂಡು ಮಗನಾಗಿದ್ದೆ ಉಳಿದವರು ಹೆಣ್ಣು ಮಕ್ಕಳು . ನನ್ನ 4 ಜನ ತಂಗಿಯರು 1995 ರಲ್ಲಿ ನನ್ನ ಮೇಲೆ ಅಪಾರ ವಿಶ್ವಾಸ ಇಟ್ಟಿದ್ದರು ಎಂದರೆ ಸರಿ . 4 ಜನ ತಂಗಿಯರು ಎಂದರೆ ವೇದ , ಲಲಿತ, ಪುಷ್ಪ ಮತ್ತು ಪ್ರತಿವಾದಿ ಜಲಜ . ನಾನು ಬೆಹರಿನ್

ನಲ್ಲಿದ್ದಾಗ ನನ್ನ ತಾಯಿಯನ್ನು ಲಿಲಿತ , ಪ್ರತಿವಾದಿ  ಜಲಜ ನೋಡಿಕೊಳ್ಳುತ್ತಿದ್ದರು ಹಾಗೂ ನಾನು ಬೇರೆಯವರನ್ನು ನೋಡಿಕೊಳ್ಳಲು ಇಟ್ಟಿದ್ದೆ. ನಮ್ಮ ಮನೆಯ ಪಕ್ಕದ ಅಮ್ಮಣ್ಣಿಯನ್ನು ನನ್ನ ತಾಯಿಯನ್ನು ನೋಡಿಕೊಳ್ಳಲು ಇಟ್ಟಿದೆ. ಪ್ರತಿವಾದಿಯ ವಿಳಾಸ ಮತ್ತು ನನ್ನ ತಾಯಿಯ ವಿಳಾಸ ಒಂದೇ ಎದಂರೆ ಸರಿ . ನನ್ನ ತಾಯಿಯನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.  ನನ್ನ ತಂಗಿಯರಿಗೆ ನನ್ನ ಮೇಲೆ ವಿಶ್ವಾಸ , ನಂಬಿಕೆ,ವಿದೇಯತೆ ಇತ್ತು ಎಂದರೆ ಸರಿ . ನಾನೂ ಕೂಡ ಅವರಿಗೆ ಮಾರ್ಗದರ್ಶನ ಮಾಡುತಿದ್ದೆ ಮತು ನಾನು ಹೇಳಿದ ರೀತಿ ಅವರು ಕೇಳುತಿದ್ದರು ಎಂದರೆ ಸರಿ . 1995 ರಲ್ಲಿ ನನ್ನ ಹೆಂಡತಿ ಗೃಹಿಣಿಯಾಗಿ ನನ್ನ ಜೊತೆ ಬೆಹರಿನ್ ನಲ್ಲಿ ಇದ್ದರು . ಅವರಿಗೆ ಮನೆಯ ವಾರ್ತೆ ಬಿಟ್ಟರೇ ಬೇರೆ ಕೆಲಸ ಮಾಡಿ ಅನುಭವ ಇರಲಿಲ್ಲ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.